## ಕಾರ್ಮಿಕರ ಸ್ಥಿತಿಗೆ ಹಿಡಿದ ಕನ್ನಡಿ

‘ಷಟ್ಪಥ ದಶಪಥಗಳೆಂಬ ಹೆದ್ದಾರಿಗಳ ಪ್ರಭೆಯಲ್ಲಿ ದೀನ–ದಲಿತರ ಬದುಕಿನ ದಾರಿಗಳ ನಿರ್ಲಕ್ಷ್ಯ’ (ಏ.20, ರಘುನಾಥ ಚ.ಹ.) ‘ನಿಮ್ಮೊಡನೆ’ ಲೇಖನ ಕಾರ್ಮಿಕರ ಹೀನಾಯ ಸ್ಥಿತಿಗೆ ಹಿಡಿದ ಕನ್ನಡಿಯಂತಿದೆ. ಇಂಥ ಸಂಗತಿಗಳಾದಾಗ ಕಾರ್ಮಿಕ ವರ್ಗಕ್ಕೆ ನ್ಯಾಯ ಒದಗಿಸುವ ಮೂಲಕ ಈ ರೀತಿಯ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಇಂದಿನ ಅಧಿಕಾರಿ ವರ್ಗ ಹಾಗೂ ಜನ ನಾಯಕರೆನಿಸಿಕೊಂಡವರ ಮೇಲಿದೆ. ಇದನ್ನು ಅವರು ಮನಗಾಣಲಿ.

– ರವಿಕುಮಾರ್ ಡಿ., ಬೆಂಗಳೂರು

## ಜನಮನದಲ್ಲಿ ಚಿರಸ್ಥಾಯಿ

‘ತೊಗಲು ಗೊಂಬೆ ಅಂಗಳದ ಧ್ರುವತಾರೆ’ (ಏ.20, ಡಾ. ದಸ್ತಗೀರ ಸಾಬ್ ದಿನ್ನಿ) ಲೇಖನ ಸಕಾಲಿಕವಾಗಿದೆ. ವೃತ್ತಿ ರಂಗಭೂಮಿ ಹಾಗೂ ಜಾನಪದ ರಂಗಭೂಮಿಯಲ್ಲಿ ಮಿಂಚಿ, ತೊಗಲು ಗೊಂಬೆ ಕಲೆಗೆ ಆಧುನಿಕ ಸ್ಪರ್ಶ ನೀಡಿ ಹತ್ತು ಹಲವು ಪ್ರಶಸ್ತಿಗಳಿಗೆ ಭಾಜನರಾದ ಬೆಳಗಲ್ಲು ವೀರಣ್ಣ ಅವರು ಜನಮನದಲ್ಲಿ ಎಂದೆಂದಿಗೂ ಚಿರಸ್ಥಾಯಿ.

–ಪಿ. ಜಯವಂತ ಪೈ, ಕುಂದಾಪುರ



## ಪ್ರವಾಸದ ಹಂಬಲ ಹೆಚ್ಚಿಸಿತು

‘ಹಲೋಂಗ್ ಬೇ ಸುಂದರ ದ್ವೀಪಗಳ ಗುಚ್ಛ’ (ಏ.20, ಗೀತಾ ಕುಂದಾಪುರ) ಪ್ರವಾಸ ಲೇಖನ ಆಕರ್ಷಣೀಯವಾಗಿದೆ. ಇಲ್ಲಿನ ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುತ್ತಾ, ಅದ್ಭುತ ಗುಹೆಗಳ ಚರಿತ್ರೆಯನ್ನು ಓದುತ್ತಲೇ ಸಂಭ್ರಮಿಸಿದೆ. ಈ ಉತ್ಸಾಹಭರಿತ ಪ್ರವಾಸ ಕಥನವು, ಹಲೋಂಗ್ ಬೇ ನೋಡಬೇಕೆಂಬ ಹಂಬಲ ಹೆಚ್ಚಿಸಿತು.

–ರೊಯಲ್

## ಹಾಸ್ಯಮಯ ನಿರೂಪಣೆ

‘ದಂಡಂ ದಶಗುಣಂ’ (ಏ.20, ಸುಮಾ ರಮೇಶ್) ಮಂದಹಾಸ ಲೇಖನ ನಮ್ಮ ಶಾಲಾ ಸಮಯವನ್ನು ನೆನಪಿಗೆ ತಂದಿತು. ಕೆಲವು ಪ್ರಸಂಗಗಳು ನಗೆ ಹೊಮ್ಮುವಂತೆ ನಿರೂಪಣೆಗೊಂಡಿವೆ. ಈ ಲೇಖನ, ಕಲಿಕಾ ಪ್ರಸಂಗಗಳ ಹಾಸ್ಯಮಯ ನಿರೂಪಣೆಯಷ್ಟೇ ಆಗಿರದೆ ಒಂದು ಕಾಲಘಟ್ಟದ ಜೀವನಮೌಲ್ಯವನ್ನು ಕಟ್ಟಿಕೊಡುವ ಬರಹವೂ ಆಗಿದೆ.

– ಪಿ. ಶ್ರೀಧರ, ಲಕಮನಹಳ್ಳಿ

## ಆಮೆಗಳ ಲೋಕದ ಕೌತುಕ

‘ಆಮೆ ಹಬ್ಬ’ (ಏ.20, ನಾಗೇಶ ಹೆಗಡೆ) ಲೇಖನ ಬಹಳ ಚೆನ್ನಾಗಿದೆ. ಆಲೀವ್ ರಿಡ್ಲೆ ಆಮೆಗಳ ಜೀವನಕ್ರಮ, ಅವುಗಳ ಸಂರಕ್ಷಣೆ ಕುರಿತು ಲೇಖಕರು ವಿವರವಾಗಿ ಮಾಹಿತಿಗಳನ್ನು ನೀಡಿದ್ದಾರೆ. ಆಮೆಗಳ ಸಂರಕ್ಷಣೆಯಲ್ಲಿ ಸ್ಥಳೀಯ ಟೊಂಕಾ ಮೀನುಗಾರರ ಆಸಕ್ತಿ ನೋಡಿ ಸಂತೋಷವಾಯಿತು. ಪ್ಲಾಸ್ಟಿಕ್ ಮತ್ತು ಬಂದರು ಯೋಜನೆ ಆಮೆಗಳಿಗೆ ಮಾರಕವಾಗುವ ಬಗ್ಗೆಯೂ ಲೇಖಕರು ಎಚ್ಚರಿಕೆ ನೀಡಿದ್ದಾರೆ. ಸರ್ಕಾರ, ಆಮೆಗಳನ್ನು ಕಾಪಾಡಿ ಈ ಸುಂದರ ಪರಿಸರವನ್ನು ಉಳಿಸಲು ಕ್ರಮ ಕೈಗೊಳ್ಳಬೇಕು.

–ಕೆ. ಗಣೇಶ ರಾಜ, ಬೆಂಗಳೂರು

## ಶ್ಲಾಘನೀಯ ಕಾರ್ಯ

ಆಮೆಗಳ ಮೊಟ್ಟೆಗಳು ಮರಿಯಾಗುವವರೆಗೆ ಕಾದು ಅವುಗಳನ್ನು ಸಮುದ್ರಕ್ಕೆ ಬಿಡುವ ಕೆಲಸವನ್ನು ಸಕಾಲದಲ್ಲಿ ಮಾಡಿ ಮುಗಿಸುವ ಹೊನ್ನಾವರದ ಮೀನುಗಾರರ ಕೆಲಸವನ್ನು ಎಷ್ಟು ಕೊಂಡಾಡಿದರೂ ಸಾಲದು. ಲೇಖನ ಓದಿ ಸಂತಸವಾಯಿತು. ಆಮೆಗಳ ರಕ್ಷಣೆ ಕುರಿತು



ಸಂಬಂಧಪಟ್ಟವರು ಸೂಕ್ತ ಯೋಜನೆ ರೂಪಿಸಿ ಅವುಗಳ ಸಂರಕ್ಷಣೆಗೆ ಕೈಜೋಡಿಸಬೇಕು.

–ವಿಜಯಾ ಪ್ರಸಾದ್

## ಮೀನುಗಾರರ ನಿಸ್ವಾರ್ಥ ಸೇವೆ

ಆಮೆ ಹಬ್ಬ ಲೇಖನ ಅದ್ಭುತವಾಗಿದೆ. ಟೊಂಕಾ ಪ್ರದೇಶದ ಮೀನುಗಾರರ ಈ ಪ್ರಕೃತಿ ಸೇವೆ ನಿಜಕ್ಕೂ ಶ್ಲಾಘನೀಯ. ಆಮೆಗಳು ಮರಿ ಮಾಡುವ ಸಂಗತಿ, ಅವುಗಳ ವಿಶಿಷ್ಟ ಜೀವನ ಕ್ರಮದ ಕುರಿತ ಸಂಗತಿಗಳನ್ನು ಲೇಖಕರು ಸೊಗಸಾಗಿ ವಿವರಿಸಿದ್ದಾರೆ. ಈ ಆಮೆಗಳ ಜೀವನಶೈಲಿ ಆಶ್ಚರ್ಯಕರ ಎನಿಸಿತು.

–ಡಾ. ಎಸ್. ಶಿಶುಪಾಲ, ದಾವಣಗೆರೆ

## ಋಣಾತ್ಮಕ ಧೋರಣೆ ಸಲ್ಲದು

‘ದಂಡಂ ದಶಗುಣಂ’ ಮಂದಹಾಸ ಲೇಖನ ಋಣಾತ್ಮಕ ಅಂಶಗಳನ್ನು ಹೊಂದಿದೆ. ದಂಡನೆಯು ಮಗುವಿನ ಮಾನಸಿಕ ಆರೋಗ್ಯದ ಮೇಲೆ ಬೀರುವ ದುಷ್ಪರಿಣಾಮಗಳು ವೈಜ್ಞಾನಿಕವಾಗಿ ಸಾಬೀತಾಗಿವೆ. ಮಕ್ಕಳ ಮೇಲಿನ ದೌರ್ಜನ್ಯವನ್ನು ಯಾರೂ ಹಗುರವಾಗಿ ಪರಿಗಣಿಸಬಾರದು.

–ಅನೂಷ ಗುಡ್ಡೇಕೊಪ್ಪ

## ರಾಜಹಕ್ಕಿಯ ಸೊಗಸಾದ ಚಿತ್ರ



‘ಕಪ್ಪುಕತ್ತಿನ ರಾಜಹಕ್ಕಿಯ ಜಾಡು ಹಿಡಿದು’ (ಏ.20, ಚಿಕ್ಕಾಯರಹಳ್ಳಿ ಡಿ. ಕೃಷ್ಣಚೈತನ್ಯ) ಲೇಖನ ಸುಂದರ ಚಿತ್ರಗಳಿಂದ ಮನಸ್ಸನ್ನು ಸೆಳೆಯಿತು. ಬರಹವೂ ಸೊಗಸಾಗಿದೆ. ಈ ಹಕ್ಕಿಗಳ ಗೂಡು ಕಟ್ಟುವಿಕೆ, ಮರಿಗಳ ಸಾಕುವಿಕೆ ಹುಬ್ಬೇರಿಸುವಂತೆ ಮಾಡಿತು. ಪ್ರಕೃತಿಯ ಸೋಜಿಗದೊಂದಿಗೆ ಸೃಷ್ಟಿಕರ್ತನ ವೈಭವತೆಯೂ ಎದ್ದು ಕಾಣುತ್ತದೆ.

–ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ

## ಸೋನ್ಸ್ ಅವರಿಗೆ ಅಕ್ಷರ ನಮನ

‘ಹಣ್ಣುಗಳ ಲೋಕದ ಹಿರಿಯಣ್ಣ’ (ಏ.20, ನರೇಂದ್ರ ರೈ ದೇರ್ಲ) ಡಾ. ಸೋನ್ಸ್ ಅವರ ಕುರಿತ ಈ ಲೇಖನ ವಿಶೇಷ ಮಾಹಿತಿಗಳನ್ನು ಒಳಗೊಂಡಿದೆ. ಹಲವು ವಿದೇಶಿ ಹಣ್ಣುಗಳನ್ನು ಇಲ್ಲಿಗೆ ಪರಿಚಯಿಸಿದ ಡಾ. ಸೋನ್ಸ್ ಅವರ ಕುರಿತು, ಅವರ ಪರಿಸರಪ್ರೀತಿ, ಸಮುದಾಯ ಕಾಳಜಿ ಸೇರಿದಂತೆ ಹಲವು ಮಾಹಿತಿಗಳು ಲೇಖನದಲ್ಲಿವೆ. ಈ ಲೇಖನ ಅವರಿಗೆ ಅಕ್ಷರ ನಮನದಂತಿದೆ.

– ನೀಲಕಂಠಪ್ಪ ಚಿಕ್ಕಮುದ್ದೆ, ಬೆಂಗಳೂರು

## ಕಾವ್ಯ ಕಮ್ಮಟಕ್ಕೆ ಅರ್ಜಿ ಆಹ್ವಾನ

ಈ ಹೊತ್ತಿಗೆ ಟ್ರಸ್ಟ್, ತನ್ನ ದಶಮಾನೋತ್ಸವ ಸಂಭ್ರಮದ ಭಾಗವಾಗಿ, ಕರ್ನಾಟಕ ಎಜುಕೇಶನ್ ಟ್ರಸ್ಟ್ ಹಾಗೂ ಕರ್ನಾಟಕ ಲೇಖಕಿಯರ ಸಂಘದ ಸಹಯೋಗದೊಂದಿಗೆ ವಿಜಯಪುರದಲ್ಲಿ ಜೂನ್ 4–5ರಂದು ಕಾವ್ಯ ಕಮ್ಮಟ ಆಯೋಜಿಸಿದೆ.

ಅತ್ಯುತ್ತಮ ಕನ್ನಡ ಕಾವ್ಯ ಪರಂಪರೆ, ಶ್ರೇಷ್ಠ ಕಾವ್ಯದ ವಿವಿಧ ಮಾದರಿಗಳ ಪರಿಚಯ, ಕಾವ್ಯ ಕಟ್ಟುವಿಕೆಯ ತಾಂತ್ರಿಕ–ತಾತ್ವಿಕ ವಿವರಗಳ ಕುರಿತು ಸಂಪನ್ಮೂಲ ವ್ಯಕ್ತಿಗಳ ಜೊತೆ ಸಂವಾದ, ಚಟುವಟಿಕೆಗಳು ಕಮ್ಮಟದ ಭಾಗವಾಗಿರುತ್ತವೆ. ಕಮ್ಮಟದಲ್ಲಿ ಭಾಗವಹಿಸಲು ಇಚ್ಛೆಯಿದ್ದವರು ಸ್ವಪರಿಚಯ, ಸಂಪರ್ಕ ಸಂಖ್ಯೆ, ಭಾವಚಿತ್ರ, ಎರಡು ಕವಿತೆಗಳನ್ನು ehottige.ks@gmail.comಗೆ ಕಳುಹಿಸಬೇಕು. ಅರ್ಜಿ ತಲುಪಲು ಮೇ 5 ಕೊನೇ ದಿನ.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in